ಗೃಹಪ್ರವೇಶಕ್ಕೆ ಬಂದಿದ್ದ ಇವರ ಹಳೆಯ ಸಹೋದ್ಯೋಗಿಗಳಲ್ಲಿ ಹೆಚ್ಚಿನವರು ಉದ್ಗರಿಸಿದ್ದರು, 'ಎಂತಹ ಅದ್ಭುತ ಮನೆ' ಎಂದು. 'ನಮ್ಮ ಸಾರ್ ಅವರ ಅಭಿರುಚಿಯಂತೂ ಬಹಳ ಶ್ರೇಷ್ಠವಾದದ್ದು' ಎಂದಿದ್ದರು. ಒಂದು ಕಾಲದಲ್ಲಿ ಇವನಿಂದ ತಿರಸ್ಕೃತರಾಗಿದ್ದ ಮಹಿಳಾ ಸಹೋದ್ಯೋಗಿಗಳಂತೂ, 'ಅಲ್ಲ, ಈಗಲೂ ಬರಲಿಲ್ಲವಲ್ಲ ಇವರ ಹೆಂಡತಿ... ಎಂಥವಳಿರಬಹುದು ಆಕೆ' ಎನ್ನುತ್ತ ಆಕೆಯನ್ನು ದೂರುವ ನೆವದಲ್ಲಿ ತಮ್ಮ ನಿರಾಸೆಯನ್ನು ತೋಡಿಕೊಂಡಿದ್ದರು.

ಗೃಹಪ್ರವೇಶಕ್ಕೆ ಸಹಾಯ, ಊಟ ಎಂದು ಬಂದವರೆಲ್ಲ ಹೋದ ನಂತರ ಅವನು ಒಂಟಿಯೇ. ಹಲವಾರು ಕಡೆಗಳಿಂದ ಕೆಲಸದ ಆಫರ್ ಬಂದರೂ ಒಪ್ಪಿಕೊಳ್ಳಲಿಲ್ಲ. ಕೆಲವರಂತೂ, 'ನಿಮ್ಮದೇ ಷರತ್ತುಗಳ ಮೇಲೆ ಕೆಲಸ ಕೊಡುತ್ತೇವೆ. ನಿಮ್ಮಂತಹವರು ನಮಗೆ ಬೇಕು' ಎಂದು ದುಂಬಾಲು ಬಿದ್ದಿದ್ದರು. ಈತ ಎಲ್ಲವನ್ನೂ ನಯವಾಗಿಯೇ ತಿರಸ್ಕರಿಸಿದ್ದ, 'ಇಲ್ಲ ನಿವೃತ್ತಿಯ ದಿನಗಳನ್ನು ನೆಮ್ಮದಿಯಿಂದ ಕಳೆಯಬೇಕೆಂದು ನಿರ್ಧರಿಸಿದ್ದೇನೆ. ಇನ್ನು ಯಾವುದೇ ಜಂಜಾಟದಲ್ಲಿ ಸಿಕ್ಕಿ ಹಾಕಿಕೊಳ್ಳಲು ಬಯಸುವುದಿಲ್ಲ' ಎಂದು ಹೇಳುತ್ತ.

ಈಗ ಏಕಾಂತದಲ್ಲಿ ಇರುತ್ತಿರುವಾಗ ಆ ಹುಡುಗಿ ಇವನನ್ನು ಪುನಃ ತೀವ್ರವಾಗಿ ಆಕ್ರಮಿಸಲಿಕ್ಕೆ ತೊಡಗಿದ್ದಳು. ಕುಳಿತಲ್ಲಿ ನಿಂತಲ್ಲಿ ಮತ್ತು ಕೆಲಸದಲ್ಲಿರುವಾಗಲೇ ಅಭ್ಯಾಸ ಮಾಡಿಕೊಂಡಿದ್ದ ತನ್ನ ಅಡುಗೆಯನ್ನು ತಾನೇ ಮಾಡಿಕೊಳ್ಳುವಾಗೆಲ್ಲ ಆಕೆ ಕಾಡಿಸಲಿಕ್ಕೆ ಹತ್ತಿದ್ದಳು. ಒಂದು ದಿನವಂತೂ ಇಡೀ ರಾತ್ರಿ ನಿದ್ದೆಯಿಲ್ಲದೆ ಹೊರಳಾಡಿದ್ದ.

ಆಗಲೇ ಅವನೂರಿನವನೇ ಒಬ್ಬ ಅದೇ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿ ಬಡ್ತಿ ತೆಗೆದುಕೊಂಡರೆ ಊರು ಬಿಡಬೇಕಾಗುತ್ತದೆಂದು ಹೆದರಿ ಬಂದ ಬಡ್ತಿಯನ್ನೂ ಬಿಟ್ಟು ವರ್ಷಗಳ ಕಾಲ ಅಲ್ಲೇ ಪಕ್ಕದೂರಿನ ಶಾಖೆಯಲ್ಲಿಯೇ ಕೆಲಸ ಮಾಡುತ್ತಿದ್ದವ ನಿವೃತ್ತಿ ಹತ್ತಿರವಾಗುತ್ತಿದ್ದಂತೆ ಹೆಚ್ಚಿನ ಪೆನ್ಶನ್‌ನ ಆಸೆಗೆ ಬಿದ್ದು ಬಡ್ತಿ ಪಡೆದು ಹೆಡ್ಡಾಫೀಸಿಗೆ ಬಂದಿದ್ದ. ಇಲ್ಲಿ ರಿಪೋರ್ಟ್ ಮಾಡಿದ ಕೆಲವೇ ದಿನಗಳಲ್ಲಿ ಊರಿನವರೆಂಬ ಪರಿಚಯದ ಹಳೆ ಹೇಳಿಕೊಂಡು ಇವನನ್ನು ಭೇಟಿಯಾಗಲು ಬಂದವ ಇವನ ಹುಡುಗಿಯ ಬಗ್ಗೆ ಹೇಳಿ ಮದುವೆಯನ್ನೂ ಆಗದೆ ತನ್ನ ಅದೇ ಹಳೆಯ ಮನೆಯಲ್ಲಿ ಇನ್ನೂ ಇವನ ನೆನಪಿನಲ್ಲಿಯೇ ಇರುತ್ತಿದ್ದುದರ ಬಗ್ಗೆಯೂ ಹೇಳಿದ್ದ. ಮಾತು ಮುಗಿಸಿ ಕೊನೆಯಲ್ಲಿ, 'ಸರ್, ಆಫೀಸಿನಲ್ಲಿ ನಿಮ್ಮ ಬಗ್ಗೆ ತುಂಬಾ ಗೌರವ ಸಾರ್... ನೀವು ಮನಸ್ಸು ಮಾಡಿದರೆ ಇನ್ನು ಎರಡೇ ವರ್ಷಕ್ಕೆ ರಿಟಾಯರ್ ಆಗಲಿಕ್ಕಿರುವ ನಾನು ನಮ್ಮ ಊರಲ್ಲಿಯೇ ರಿಟಾಯರ್ ಆಗಲು ಸಾಧ್ಯವಿದೆ' ಎಂದು ತನ್ನ ಭೇಟಿಯ ಉದ್ದೇಶವನ್ನು ಪ್ರಕಟಪಡಿಸಿ ಹೊರಟು ಹೋಗಿದ್ದರೂ ಅವನ ಮನಸ್ಸಿನಲ್ಲಿ ಉಳಿದದ್ದು ಆತ ಹೇಳಿ ಹೋದ – 'ಆಕೆ ಇನ್ನೂ ನಿಮ್ಮ ನೆನಪಿನಲ್ಲಿಯೇ ಇದ್ದಾಳೆ' ಎನ್ನುವುದು. ಅದನ್ನು ಕೇಳಿದ ಅವನ ಮನಸ್ಸಿಗೆ ಬಂದದ್ದು, 'ಏನಾದರಾಗಲಿ ಊರಿಗೆ ಹೋಗಿ ಅವಳನ್ನು ಭೇಟಿ ಮಾಡಲೇಬೇಕು' ಎಂದು.

ಮಾರನೆಯ ದಿನವೇ ಹೊರಟಿದ್ದ ತತ್ಕಾಲ್ ಮೂಲಕ ಟ್ರೈನ್ ಟಿಕೆಟ್ ಪಡೆದು. ಚಿಕ್ಕವನಿದ್ದಾಗ ತನ್ನೂರಿಗೂ ಬರುತ್ತದೆಂದು ಇವನು ಸಂಭ್ರಮಿಸಿದ ಅದೇ ಟ್ರೈನು. ಪ್ರಾಯೋಗಿಕ ಪ್ರಯಾಣವನ್ನು ಆರಂಭಿಸಿದಾಗಲೇ ಗಂಟೆಗಟ್ಟಲೆ ಕಾಯುತ್ತಿದ್ದ ಟ್ರೈನು. ಮೊತ್ತ ಮೊದಲ ಬಾರಿಗೆ ಟಿಕೆಟ್ ಇಲ್ಲದೇ ಪ್ರಯಾಣಿಸಿ ಒದೆಸಿಕೊಂಡ ಟ್ರೈನು. ದಾರಿಯುದ್ದಕ್ಕೂ ಬಾಲ್ಯದ ನೆನಪುಗಳು ಮರುಕಳಿಸಿದ್ದುವು. ರಮ್ಯ ನೆನಪುಗಳು ಒಂದರ ಹಿಂದೆ ಒಂದು. ಪ್ರತಿ ನೆನಪಿನ ಕೇಂದ್ರವೂ ಆಕೆಯೇ.

★★★

ಅರೆತೆರೆದ ಬಾಗಿಲನ್ನು ತಳ್ಳುವಾಗ ಕೈ ನಡುಕ. ಒಳಗೆ ಕಾಲಿಡುತ್ತಿದ್ದಂತೆ ಮನಸ್ಸಿನಲ್ಲಿ ಆತಂಕ.